# ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ

**ಸಿಸಿ ಸಂಖ್ಯೆ: 2111/2022**

ಚಾ.ಸಾ-01, ಪ್ರಾ.ಸಾ-01

| | | |
|---|---|---|
| ಹೆಸರು | : | ಜಕೀಯಾ ಬೇಗಂ |
| ತಂದೆಯ ಹೆಸರು | : | ಮುನೀರ್ ಜಾನ್ |
| ವಯಸ್ಸು | : | 38 |
| ವೃತ್ತಿ | : | ಗೃಹಿಣಿ |
| ವಾಸ | : | ಬನ್ನೂರು |

**ದಿನಾಂಕ 16.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಚಾಸಾ-2 ನನ್ನ ತಂದೆ. ಚಾಸಾ-3 ನನ್ನ ಅಕ್ಕ. ಚಾಸಾ-4 ನನ್ನ ತಮ್ಮ. ಚಾಸಾ-5 ನನ್ನ ಸೋದರ ಮಾವ. ಚಾಸಾ-6 ರಿಂದ 9 ರವರ ಪರಿಚಯವಿದೆ. ಆರೋಪಿತ ನನ್ನ ಗಂಡ.

ಆರೋಪಿತ ನನಗೆ ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡಿಲ್ಲ. ನನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ. ನನಗೆ ಕೊಲೆ ಬೆದರಿಕೆ ಹಾಕಿಲ್ಲ. ನನಗೆ ವರದಕ್ಷಿಣೆ ತರುವಂತೆ ಒತ್ತಾಯ ಮಾಡಿಲ್ಲ. ನಾನು ಪೊಲೀಸರಿಗೆ ದೂರು ಮತ್ತು ಮುಂದುವರೆದ ಹೇಳಿಕೆ ನೀಡಿಲ್ಲ. ಪೊಲೀಸರು ನನ್ನ ಸಮಕ್ಷಮ ಪಂಚನಾಮ ಜರುಗಿಸಿಲ್ಲ ಮತ್ತು ಏನನ್ನೂ ಜಪ್ತಿಪಡಿಸಿಲ್ಲ.

ನನಗೆ ಈಗ ತೋರಿಸಿದ ದಾಖಲೆಗಳಲ್ಲಿ ನನ್ನ ಸಹಿಗಳು ಇವೆ. ಆ ದಾಖಲೆಗಳು ದೂರು ಮತ್ತು ಪಂಚನಾಮಗಳಾಗಿದ್ದು, ಅವುಗಳನ್ನು ಕ್ರಮವಾಗಿ ನಿಪಿ.1 ರಿಂದ 4

ಎಂದು ಮತ್ತು ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.1(ಎ) ಯಿಂದ 4(ಎ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕ 22.07.2020 ರಂದು ಆರೋಪಿತ ನನ್ನನ್ನು ವಿವಾಹವಾಗಿದ್ದು, ನಂತರ ಹೆಚ್ಚಿನ ವರದಕ್ಷಿಣೆ ತರುವಂತೆ ಆತ ನನಗೆ ಒತ್ತಾಯ ಮಾಡಿ, ನನಗೆ ಅವಾಚ್ಯ ಶಬ್ದಗಳಿಂದ ಬೈದು, ದಿನಾಂಕ 20.02.2022 ರಂದು ನನ್ನ ತಂದೆಯ ಮನೆಯಲ್ಲಿ ಪಂಚಾಯಿತಿ ಮಾಡಿಸಿ, ನನ್ನ ಗಂಡನಿಗೆ ತಿಳುವಳಿಕೆ ಹೇಳಿದರೂ ಕೂಡ ಆತ ನನಗೆ ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡಿದ್ದು, ನನಗೆ ಕೊಲೆ ಬೆದರಿಕೆ ಹಾಕಿದ್ದು, ನನ್ನ ವಿವಾಹದ ವೇಳೆಗೆ ಆತ ನನ್ನ ತವರು ಮನೆಯಿಂದ ರೂ.2.00 ಲಕ್ಷ ನಗದು, ಒಂದು ಚಿನ್ನದ ಉಂಗುರ ಮತ್ತು ವಾಚ್‌ನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಹಾಗಾಗಿ ನಿಪಿ-1 ರಂತೆ ದೂರನ್ನು ನಾನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂಕ 14.03.2022 ರಂದು ಮಧ್ಯಾಹ್ನ 1.00 ರಿಂದ 2.00 ಗಂಟೆ ಸಮಯದಲ್ಲಿ ನಾನು ತೋರಿಸಿದಂತೆ ಪೊಲೀಸರು ಬನ್ನೂರಿನ ನನ್ನ ತಂದೆಯ ಮನೆಯಲ್ಲಿ ಚಾಸಾ-6 ಮತ್ತು 7 ರವರ ಸಮಕ್ಷಮ ಪಂಚನಾಮವನ್ನು ನಿಪಿ.2 ರಂತೆ

ಜರುಗಿಸಿ, ವಿವಾಹದ ಭಾವಚಿತ್ರ ಮತ್ತು ನಿಖಾನಾಮವನ್ನು ಜಪ್ತಿಪಡಿಸಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 20.03.2022 ರಂದು ಮಧ್ಯಾಹ್ನ 3.00 ರಿಂದ 4.00 ಗಂಟೆ ಸಮಯದಲ್ಲಿ ನಾನು ತೋರಿಸಿದಂತೆ ಪೊಲೀಸರು ಹುಣಸೂರು ಪಟ್ಟಣದ ಆರೋಪಿತನ ತಾಯಿಯ ಮನೆಯಲ್ಲಿ ಚಾಸಾ–8 ಮತ್ತು 9 ರವರ ಸಮಕ್ಷಮ ಪಂಚನಾಮವನ್ನು ನಿಪಿ.3 ರಂತೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 22.03.2022 ರಂದು ಮಧ್ಯಾಹ್ನ 1.00 ರಿಂದ 2.00 ಗಂಟೆ ಸಮಯದಲ್ಲಿ ನಾನು ತೋರಿಸಿದಂತೆ ಪೊಲೀಸರು ಬೆಂಗೂರು ನಗರದ ಆರೋಪಿತನ ಮನೆಯಲ್ಲಿ ಚಾಸಾ–3 ಮತ್ತು 8 ರವರ ಸಮಕ್ಷಮ ಪಂಚನಾಮವನ್ನು ನಿಪಿ.4 ರಂತೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 28.08.2022 ರಂದು ನಾನು ಘಟನೆಯ ಕುರಿತು ಪೊಲೀಸರಿಗೆ ಮುಂದುವರೆದ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅದನ್ನು ತಿರಸ್ಕರಿಸಿದ್ದರಿಂದ, ಅದನ್ನು ನಿಪಿ.5 ಎಂದು ಗುರುತಿಸಲಾಯಿತು. ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ ಇರುವುದಿಲ್ಲ.**

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದ. ತಿ.ನರಸೀಪುರ**